**ಸಾಕ್ಷಿಯನ್ನು ದಿಃ 03.08.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನನ್ನ ತಾಯಿಯ ಹೆಸರು ದೊಡ್ಡ ಹೆಣ್ಣಮ್ಮ. ನನ್ನ ಅಜ್ಜಿಯ ಹೆಸರು ಪುಟ್ಟಮಾದಮ್ಮ. ನನ್ನ ತಾತನ ಹೆಸರು ಪಟೇಲ್ ಸಿದ್ದೇಗೌಡ. ಪಟೇಲ್ ಸಿದ್ದೇಗೌಡ ಇವರಿಗೆ ಇಬ್ಬರು ಹೆಂಡತಿಯರು. ನನ್ನ ಅಜ್ಜಿ ಮೊದಲನೇ ಹೆಂಡತಿ. ಎರಡನೇ ಹೆಂಡತಿ ಹೆಸರು ರಾಮಮ್ಮ. ಪಟೇಲ್ ಸಿದ್ದೇಗೌಡರಿಗೆ ನನ್ನ ಅಜ್ಜಿ ಜೀವಂತ ಇರುವಾಗಲೇ ಎರಡನೇ ಮದುವೆ ಆಗಿರುತ್ತಾರೆ. ರಾಮಮ್ಮ ಇವರಿಗೆ ಸಿದ್ದೇಗೌಡ, ಶಿವಣ್ಣ, ದೊಡ್ಡಮರಿ ಹಾಗೂ ಗುರುಸ್ವಾಮಿ ಎಂಬ ನಾಲ್ಕು ಜನ ಮಕ್ಕಳು. ಸಿದ್ದೇಗೌಡ ಇವರ ಮಗ ಸಿದ್ಧರಾಜು ಇವರು ನನಗೆ ಗೊತ್ತು. ಸಿದ್ದರಾಜು ರವರ ತಂಗಿಗೆ ನಾನು ಮದುವೆಯಾಗಿರುತ್ತೇನೆ. ವಾದಿ ಮರಿಯಮ್ಮ ನನಗೆ ಚಿಕ್ಕಮ್ಮನಾಗಬೇಕು. ಮರಿಯಮ್ಮ ರವರು ತೀರಿಹೋಗಿರುತ್ತಾರೆ. ವಾದಿಯು ಆಸ್ತಿಗಳಲ್ಲಿ ಭಾಗ ಬರಬೇಕು ಎಂದು ಕೋರಿ ದಾವೆ ಹೂಡಿರುತ್ತಾರೆ .

(1 ರಿಂದ 4 ಮತ್ತು 6 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.